ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸಚಿವರು ಬಹಳ ಹಣ ಮುಧೋಳ್ ತಾಲೂಕಿಗೆ ಕೊಟ್ಟಿದೆ ಎಂದು ಹೇಳಿದರು. ಬಹಳ ಸಂತೋಷ ಅವರು ಹೇಳಿದಂತೆ, ಈ 10 ಸಾವಿರಕ್ಕಿಂತ ಹೆಚ್ಚಿಗೆ ಏನು ಈ ವಿಶಿಷ್ಟ ಗುಂಪಿಗೆ ಕೊಡುತ್ತಿದ್ದಾರೆ. ಅದರ ನಲುವಾಗಿ ಉಳಿದ ಸಾಮಾನ್ಯ ಜನರಿಗೆ ಪಂಪ್‌ಸೆಟ್ಟುಗಳಿಗೆ ಬಂದಂತಹ ಹಣವನ್ನು ಇದಕ್ಕೆ ಉಪಯೋಗ ಮಾಡಿ, ಆ ಜನರಿಗೆ ಕೊಡಲು ಹಣ ಏಲ್ಲವೆಂದು ಹೇಳಿದ್ದು ನಿಜವೇ, ಮತ್ತು ಹಾಗೆ ಯಾರು ಮಾಡಿದ್ದಾರೋ, ಅದನ್ನು ವಿಚಾರ ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಯಾವ ಅಮೌಂಟನ್ನು ಇವತ್ತಿನ ದಿವಸ ವಿಶಿಷ್ಟವಾಗಿ ಭೂ ಅಭಿವೃದ್ಧಿಗೆ ಕೊಟ್ಟಿದ್ದಾರೋ, ಅದನ್ನು ಅದಕ್ಕೇನೆ ಉಪಯೋಗ ಮಾಡಬೇಕಾಗುತ್ತದೆ. ಅದನ್ನು ಬೇರೆ ತರಹ ಉಪಯೋಗ ಮಾಡಿದ್ದಾದರೆ ಅದು ಮಿಸ್‌ಅಪ್ರೊಪ್ರಿಯೇಷನ್ ಆಗುತ್ತದೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಸ್ವಾಮಿ 1968-69 ಮತ್ತು 69-70ನೇ ಸಾಲಿಗೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರು 5 ಜನಗಳಿಗೆ ಹಣವನ್ನು ಏನು ಮುಂಜೂರು ಮಾಡಿದ್ದಾರೆಯೋ ಅದಕ್ಕಿಂತ ಕಡಿಮೆ ಹಣವನ್ನು ಕೊಟ್ಟಿದ್ದಾರೆ. ಅವರೇನಾದರೂ ಹಣ ಬೇಡ ಎಂದು ಹೇಳಿದರೆ ಅಥವಾ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರು ಹಣವನ್ನು ಕೊಡಲಿಲ್ಲವೇ ಹೇಗೆ ?

ಶ್ರೀ ಪಿ. ಎಂ. ನಾಡಗೌಡ.—ಅವರು ಹಣವನ್ನು ಕೊಡಬೇಕಾದರೆ ಯಾವ ಪ್ರಮಾಣದಲ್ಲಿ ಕೆಲಸವನ್ನು ಮಾಡಬೇಕಾಗಿದೆಯೋ ಆ ಪ್ರಮಾಣದಲ್ಲಿ ಕೆಲಸವನ್ನು ಮಾಡಿದಮೇಲೆ ಆ ಬಗ್ಗೆ ಸರ್ಟಿಫಿಕೇಟ್ ಬಂದಮೇಲೆ ಮುಂದಿನ ಹಣವನ್ನು ಕೊಡಬೇಕಾಗುತ್ತದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಭೂ ಅಭಿವೃದ್ಧಿ ಬ್ಯಾಂಕಿನವರು ಹಣವನ್ನು ಮುಂಜೂರು ಮಾಡುವಾಗ ಡಿಸಿರ್ವಿಂಗ್ ಕೇಸ್, ಶ್ರೀಮಂತರು ಯಾರು ಇವ್ವಾರೆಯೋ ಅವರಿಗೆ ಕೊಡುತ್ತೀರಾ ಅಥವಾ ಡಿಜರ್ವಿಂಗ್ ಕೇಸ್ ಬಡವರು ಯಾರು ಇವ್ವಾರೆಯೋ ಅವರಿಗೆ ಕೊಡುತ್ತೀರಾ ? ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರು ಶ್ರೀಮಂತರಿಗೆ ಮಾತ್ರ ಸಾಲವನ್ನು ಮುಂಜೂರು ಮಾಡಬೇಕೆಂದು ತತ್ವವನ್ನು ಇಟ್ಟುಕೊಂಡಿದ್ದಾರೆಯೇ ?

ಶ್ರೀ ಪಿ. ಎಂ. ನಾಡಗೌಡ.—ನನಗೆ ಸಚೇದಾಶ್ಚರ್ಯವಾಗುತ್ತದೆ ಮಾನ್ಯ ಸದಸ್ಯರು ಹೇಳುವುದನ್ನು ಕೇಳಿ. ಸರ್ಕಾರದವರು ನಿಯಮಾವಳಿಗಳನ್ನು ಬಹಳ ಚೆನ್ನಾಗಿ ಮಾಡಿವ್ವಾರೆ. ಯಾರು ಮೊದಲು ಅರ್ಜಿಗಳನ್ನು ಕೊಟ್ಟಿರುತ್ತಾರೆಯೋ ಅವುಗಳನ್ನು ಮೊದಲು ತೆಗೆದುಕೊಂಡು ಪ್ರೊಸೀಸ್ ಮಾಡಿ ಅವರಿಗೆ ಹಣವನ್ನು ಮುಂಜೂರು ಮಾಡಿದಮೇಲೆ ಮುಂದಿನ ಅರ್ಜಿಗೆ ಹೋಗಬೇಕಾಗುತ್ತದೆ. ಪ್ರಯಾರಿಟಿ ಪ್ರಕಾರ ಅರ್ಜಿಗಳನ್ನು ತೆಗೆದುಕೊಂಡು ಸಾಲಗಳನ್ನು ಮುಂಜೂರು ಮಾಡಬೇಕೆಂದು ಆದೇಶವನ್ನು ಕೊಟ್ಟಿದೆ.

Sri C. K. RAJAIAH SHETTY.—When the well loan is sanctioned the Government is committed to give the full amount of the well. There would be no meaning in paying only first instalment and withholding the second instalment. If the second instalment of the loan amount is not paid, how can the work be completed ?

ಶ್ರೀ ಪಿ. ಎಂ. ನಾಡಗೌಡ.—ಒಮ್ಮೆ ಕಮಿಟ್ ಮಾಡಿಕೊಂಡಮೇಲೆ ಕಂತು ಪ್ರಕಾರ ಪೂರ್ಣವಾದ ಹಣವನ್ನು ಕೊಡುವುದು ಭೂ ಅಭಿವೃದ್ಧಿ ಬ್ಯಾಂಕಿನವರ ಜವಾಬ್ದಾರಿ ಇದೆ. ಅದನ್ನು ಕೊಡುವಾಗ ಯಾವ ಪ್ರಮಾಣದಲ್ಲಿ ರೊಕ್ಕವನ್ನು ಕೊಟ್ಟಿರುತ್ತಾರೆ, ಯಾವ ಪ್ರಮಾಣದಲ್ಲಿ ಕೆಲಸ ಆಗಬೇಕೆಂದು ಇರುತ್ತದೆಯೋ ಆ ಪ್ರಮಾಣದಲ್ಲಿ ಕೆಲಸ ಆಗಿದೆ ಎಂದು ಸರ್ಟಿಫಿಕೇಟ್ ಬಂದಮೇಲೆ ಮುಂದಿನ ಹಣವನ್ನು ಕೊಡಬೇಕಾಗುತ್ತದೆ.

Construction of Channel of Hemavathi Project

245. **Sri M. K. BOMME GOWDA** (K. R. Pet).—

Will the Chief Minister be pleased to state :—

(*a*) whether it has been proposed to take up the construction of the Channel of Hemavathi Project along with Hemavathi Project ;

(*b*) the amount provided for the said channel ?

Sri VEERENDRA PATIL (Chief Minister).—

(*a*) Yes. But the channel work will be taken up after considering the stage of the dam work.

(*b*) No amount has been provided separately for the channel.

ಶ್ರೀ ಎಂ. ಕೆ. ಬೊಮ್ಮೇಗೌಡ.—ಸ್ವಾಮಿ, ನಾನು ನನ್ನ ಪ್ರಶ್ನೆಯಲ್ಲಿ ಹೇಮಾವತಿ ಯೋಜನೆ ಜೊತೆಯಲ್ಲಿಯೇ ಅವರ ನಾಲೆಯನ್ನೂ ನಿರ್ಮಿಸುವ ಕೆಲಸವನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆಯೇ ಎಂದು ಕೇಳಿದ್ದಕ್ಕೆ ಹಾಗೆ, ಆದರೆ ಅಣೆಯ ಕೆಲಸದ ಹಂತವನ್ನು ಪರಿಗಣಿಸಿ ನಾಲೆಯ ಕೆಲಸವನ್ನು ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದೀರಿ, ಅವನ್ನು ಈಗ ತೆಗೆದು ಕೊಳ್ಳುವ ವಿಚಾರ ಏನಾಗಿದೆ ?

†ಶ್ರೀ ವೀರೇಂದ್ರ ಪಾಟೀಲ್.—ಈಗ ಡ್ಯಾಂ ವರ್ಕ್ ಪ್ರಾರಂಭವಾಗಿ ಕೆಲಸ ನಡೆಯುತ್ತಿದೆ. ಡ್ಯಾಮ್ ವರ್ಕಿಗೆ ಹೆಚ್ಚಿನ ಹಣ ಬೇಕಾಗುತ್ತದೆ. ಸ್ವಲ್ಪಮಟ್ಟಿಗೆ ಕೆನಾಲ್ ವರ್ಕ್ ಕೂಡ ತೆಗೆದು ಕೊಳ್ಳಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಇದಕ್ಕೆ ಪ್ಲಾನು ಮತ್ತು ಎಸ್ಟಿಮೇಟು ತಯಾರಾಗುತ್ತಿದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ದುಡ್ಡು ದೊರೆಯುವುದಿಲ್ಲ ಎಂಬುದು ನಮಗೆ ಗೊತ್ತಿದೆ. ಅದಕ್ಕೆ ಕೇಂದ್ರ ಸರ್ಕಾರದವರೇನಾದರೂ ದುಡ್ಡು ಕೊಡುತ್ತಾರೆಯೇ ? ಅಥವಾ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಹಾಕುವುದಕ್ಕೆ ಒಂದು ಮುನೂಚಿಯನ್ನು ಈ ಸಭೆಯಲ್ಲಿ ತಂದರೆ ಆ ಪ್ರದೇಶದ ಜನಗಳ ಮೂಲಕ ದುಡ್ಡನ್ನು ವಸೂಲು ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಆದ್ದರಿಂದ ಆ ಬಿಲ್ಲನ್ನು ತರುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಈಗಾಗಲೇ ಹೇಳಿದೆ ಆ ಕೆಲಸವನ್ನು ಮಾಡಬೇಕು ಎನ್ನುವ ಬಗ್ಗೆ ಅದಕ್ಕೆ ಬೇಕಾಗಿರತಕ್ಕ ಪ್ಲಾನು ಮತ್ತು ಎಸ್ಟಿಮೇಟನ್ನು ತಯಾರು ಮಾಡುವುದಕ್ಕೆ ಇಂಜಿನಿಯರಿಗೆ ಹೇಳಿದ್ದೇನೆ ಎಂದು. ಚಾನಲ್ ಕೆಲಸವನ್ನು ಮಾಡಬೇಕು ಎನ್ನುವ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ. ಪ್ಲಾನು ಎಸ್ಟಿಮೇಟು ಬಂದಮೇಲೆ ಮುಂದಿನ ಕ್ರಮವನ್ನು ತೆಗೆದು ಕೊಳ್ಳುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—10 ಮೈಲಿ ಚಾನಲ್ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಅವಕ್ಕೆ ಒಂದು ಕೋಟಿ ರೂಪಾಯಿಗಳನ್ನು ಸರ್ಕಾರದವರು ಒದಗಿಸಿದ್ದಾರೆ. ಆದರೂ ಸಹ ಈ ಕೆಲಸ ತಡವಾಗುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ನಾನು ಈಗಾಗಲೇ ಹೇಳಿದ್ದೇನೆ, 10 ಮೈಲಿ ಕೆನಾಲ್ ವರ್ಕ್ ತೆಗೆದುಕೊಳ್ಳಬೇಕೆಂದು ವಿಚಾರ ಮಾಡಿದ್ದೇವೆ ಎಂದು. ಇವರ ಬಗ್ಗೆ ಪ್ಲಾನು ಮತ್ತು ಎಸ್ಟಿಮೇಟು ತಯಾರಾಗಿ ಬಂದಮೇಲೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಚಾನಲ್‌ಗಳ ಕೆಲಸವನ್ನು ತೆಗೆದುಕೊಳ್ಳುವಾಗ ಮೊದಲು ಎಡದಂಡನಾಲೆಯ ಕೆಲಸವನ್ನು ಮೊದಲು ತೆಗೆದುಕೊಳ್ಳಬೇಕು. ಏಕೆಂದರೆ ನಾಗಮಂಗಲ ತಾಲ್ಲೂಕು ಕ್ಷಾಮಪೀಡಿತ ಪ್ರದೇಶವಾಗಿರುವುದರಿಂದ ಎಡದಂಡೆ ನಾಲೆಯ ಕೆಲಸವನ್ನು ಮೊದಲು ತೆಗೆದು ಕೊಂಡು ಆ ಭಾಗಕ್ಕೆ ನೀರಾವರಿ ಅನುಕೂಲವನ್ನು ಮಾಡಿಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಹೇಮಾವತಿ ಯೋಜನೆಯಿಂದ ನಾಗಮಂಗಲ ತಾಲ್ಲೂಕ್‌ನಲ್ಲಿ ಎಷ್ಟು ಎಕರೆಗೆ ನೀರಾವರಿಯಾಗುತ್ತದೆ ಎಂಬ ಬಗ್ಗೆ ಪ್ರತ್ಯೇಕ ಪ್ರಶ್ನೆ ಹಾಕಿದರೆ ಉತ್ತರ ಕೊಡ ಬಹುದು. ಈ ಯೋಜನೆಯಿಂದ ಸುಮಾರು ಒಂದು ಲಕ್ಷ ಎಕರೆಗೆ ನೀರಾವರಿಯಾಗುತ್ತದೆ. ಯಾವ ಯಾವ ಏರಿಯಾದಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ಆಗುತ್ತದೆ ಎಂಬ ವಿವರ ಈಗ ನನ್ನಲ್ಲಿ ಇಲ್ಲ. ಈ ಯೋಜನೆಯು ಎರಡನೆಯ ಹಂತದಲ್ಲಿ ನಾಗಮಂಗಲ ತಾಲ್ಲೂಕಿನ ಎಷ್ಟು ಎಕರೆಗೆ ನೀರಾವರಿ ಯಾಗುತ್ತದೆಂದು ಮಾನ್ಯ ಸದಸ್ಯರು ಕೇಳಿತಿರುತ್ತಾರೆ. ಆ ವಿವರ ನನ್ನ ಹತ್ತಿರ ಇಲ್ಲ.

ಶ್ರೀ ಎಂ. ಬಸವರಾಜು.—ಈಗ ಮೊದಲು ಎಡದಂಡೆನಾಲೆಯನ್ನು ತೆಗೆದುಕೊಳ್ಳುತ್ತಾರೆಂದು ತಿಳಿಸಿಬಂದಿದೆ. ಅವರ ಜೊತೆಗೆ ಬಲದಂಡೆನಾಲೆಯನ್ನು ಸಹ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈ ಯೋಜನೆಯಲ್ಲಿ ಎಡವಂಡೆನಾಲೆ ಬಹಳ ದೊಡ್ಡದು. ಅದು 159 ಮೈಲಿ ಉದ್ದ ಹೋಗುತ್ತದೆ. ಬಲದಂಡೆನಾಲೆ 58 ಮೈಲಿ ಉದ್ದ ಹೋಗುತ್ತದೆ. ಈ ನಾಲೆಯಿಂದ 15 ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಎಡದಂಡೆನಾಲೆಯ ಕೆಲಸವನ್ನು ಸ್ವಲ್ಪ ಪ್ರಮಾಣದಲ್ಲಿ ಈ ವರ್ಷ ತೆಗೆದುಕ್ಕೊಬೇಕೆಂಬ ವಿಚಾರ ಇದೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಈ ಯೋಜನೆಯಿಂದ ಹಾಸನ ತಾಲ್ಲೂಕ್‌ನಲ್ಲಿ ಮತ್ತು ಅರಕಲಗೂಡು ತಾಲ್ಲೂಕ್‌ನಲ್ಲಿ 10 ಸಾವಿರ ಎಕರೆ ಪ್ರದೇಶವಷ್ಟು ಮುಳುಗಡೆಯಾಗುತ್ತದೆ. ಆ ರೀತಿ ಮುಳುಗಡೆಯಾದಂಥ ಪ್ರದೇಶದ ರೈತರಿಗೆ ಬೇರೆ ಕಡೆ ಜಮೀನು ಒದಗಿಸಿಕೊಡುವುದಕ್ಕೆ ಜಾಗ್ರತೆ ಏರ್ಪಾಡು ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕಾಗಿ ಕನ್ಸರ್‌ವೇಟಿವ್ ಕಮಿಟಿ ಇದೆ. ಈಗಾಗಲೇ ಈ ಬಗ್ಗೆ ಅನೇಕ ಸರ್ಕುಲರ್‌ಗಳನ್ನು ಹೊರಡಿಸಲಾಗಿದೆ ಮುಳುಗಡೆಯಾದ ಪ್ರದೇಶದ ಜನರಿಗೆ ಯಾವ ರೀತಿ ಬೇರೆ ಕಡೆ ಜಮೀನು ಒದಗಿಸಬೇಕು ಎಂಬ ಬಗ್ಗೆ ಅಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ. ಮತ್ತು ಮುಳುಗಡೆಯಾದ ಪ್ರದೇಶದ ಜನರಿಗೆ ಬೇರೆ ಕಡೆ ಜಮೀನು ಒದಗಿಸುವ ಬಗ್ಗೆ ಪ್ರತ್ಯೇಕವಾದ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಚ್. ಎನ್. ನಂಜೇಗೌಡ.—ಅಡ್ವಾನ್ಸ್ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ವಸೂಲು ಮಾಡುವ ಬಗ್ಗೆ ಒಂದು ಬಿಲ್ಲನ್ನು ತರುತ್ತೇವೆಂದು ಹೇಳಿದಿರಿ. ಆ ರೀತಿ ತರುವುದಕ್ಕೆ ಮೊದಲು ಈಗ ತುಂಗಭದ್ರಾ ಮುಂತಾದ ಯೋಜನೆಗಳು ಏಳೆಂಟು ಏನು ಆಗಿವೆ, ಆ ಭಾಗದ ಜನರಿಂದ ಬೆಟರ್‌ಮೆಂಟ್ ಲೆವಿಯನ್ನು ವಸೂಲು ಮಾಡುವುದಕ್ಕೆ ಏನೇನು ಕಾರ್ಯಕ್ರಮ ತೆಗೆದು ಕೊಂಡಿದ್ದೀರಿ ಎಂಬುದನ್ನು ಹೇಳುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಾದ ಬೊಮ್ಮೇಗೌಡರು ತಮ್ಮ ಭಾಗದ ಜನರು ಅಡ್ವಾನ್ಸ್ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ನನ್ನು ಕೊಡುವುದಕ್ಕೆ ತಯಾರು ಇದ್ದಾರೆ, ಈ ಯೋಜನೆಯ ಕೆಲಸವನ್ನ ಜಾಗ್ರತೆ ಮಾಡಿ ಮುಗಿಸಿ ಎಂದು ಹೇಳಿದಾಗ ನಾನು ಹಾನರ್ ಕೆಲಸವನ್ನು ಈ ವರ್ಷ ಸ್ವಲ್ಪ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕೆಂದಿದ್ದೇವೆ ಎಂದು ಹೇಳಿದೆ. ಬೆಟರ್‌ಮೆಂಟ್ ಲೆವಿ ಎಲ್ಲೆಲ್ಲಿ ವಸೂಲಿಯಾಗಬೇಕಾಗಿದೆ, ಮತ್ತು ಎಲ್ಲೆಲ್ಲಿ ಹಾಕಬೇಕಾಗಿದೆ ಎಂಬ ಬಗ್ಗೆ ಕಾನೂನು ಪಾಸಾಗಿದೆ. ಆದರೆ ಎಷ್ಟು ಪ್ರಮಾಣದಲ್ಲಿ ವಸೂಲಿಯಾಗಿದೆ ಎಂಬ ವಿವರಗಳನ್ನು ಹೇಳುವುದಕ್ಕೆ ನಾನು ಈಗ ತಯಾರು ಇಲ್ಲ.

Mr. SPEAKER.—As regards Question No. 289 the hon. Minister has written a letter to me that in view of some urgency he will not be able to be present in the House. I shall held over the question.

Sri H. SIDDAVEERAPPA.—Sir, this would be a very dangerous precedent to hold-over a question because an hon. Minister incharge of the portfolio is absent. He has to be present here. If you concede that amount of leniency to them, the same amount of leniency should be given to the members. If on any day we are not able to come to the House and if we write to you to postpone the questions standing in our names, you have to do so. The Council of Ministers are jointly responsible. Let any one of them answer the questions, if the concerned hon. Minister is absent.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊನ್ನೆ ದಿನ ಒಂದು ಪ್ರಶ್ನೆ ಬಂದಾಗ ಕೂಡ ಯಾರೂ ಮಂತ್ರಿಗಳಿಲ್ಲ ಎಂದು ಹೇಳಿದಾಗ ನಾನ್ಯ ಮುಖ್ಯ ಮಂತ್ರಿಗಳು ತಕ್ಷಣ ಇದರ ಬಗ್ಗೆ ಸೂಕ್ತ ಏರ್ಪಾಡು ಮಾಡುವುದಾಗಿ ಹೇಳಿದರು. ಈ ದಿವಸ ಕೂಡ ಇದೇ ರೀತಿ ರಿಪೀಟ್ ಆಗಿದೆ. ಇದು ಒಂದು ಒಳ್ಳೆಯ ಸಂಪ್ರದಾಯವಾಗುವುದಿಲ್ಲ. ಯಾವ ಮಂತ್ರಿಗಳು ಉತ್ತರ ಕೊಡಬೇಕೆಂದು ಇರಬೇಕೋ ಅವರು ಇಲ್ಲಿ ಹಾಜರಿದ್ದು ಉತ್ತರ ಕೊಡಬೇಕು, ಇಲ್ಲದೇ ಇದ್ದರೆ ಬೇರೆ ಯಾರಾದರೂ ಖಂಡಿತ ಇದಕ್ಕೆ ಉತ್ತರ ಕೊಡುವ ಏರ್ಪಾಡು ಮಾಡಬೇಕು. ಇವರ ಬಗ್ಗೆ ತಾವು ಸರಿಯಾದ ಆರ್ಡರು ಕೊಟ್ಟು ಅದನ್ನು ಕಡ್ಡಾಯವಾಗಿ ಪಾಲಿಸುವಂತೆ ಮಾಡಬೇಕು.

Sri G. DUGGAPPA.—There is an army of Ministers, Ministers of State and Deputy Ministers. There is the Deputy Minister also. The Minister concerned should have entrusted this work to him.

Mr. SPEAKER.—I request the Government to be more vigilant. It is rather unfortunate that the Minister is absent.

Sri K. PUTTASWAMY (Minister for Law, Labour and Parliamentary Affairs).—I agree with the hon. Members that answers should be given and it is the responsibility of the Ministry. As far as possible we will be ready to answer. But occasions arise when it is not possible for a Minister in-charge of the question to be present. The Minister for Health is away at Delhi on official duty. But he has sent a requisition to hold over the question. I do not think there is any cause for grievance on the part of the members.

Sri H. SIDDAVEERAPPA.—It is the duty of the Minister for Parliamentary Affairs to come prepared to answer the question. It is joint responsibility. When we were only five Ministers, we used to answer 30 questions a day. Now you are 28 in number. What for are you here?

Mr. SPEAKER.—The Hon. Minister has said that he has gone to Delhi for urgent work and requested me to hold over this question 289. As far as possible questions which do not require personal attention of the Minister in-charge may be answered by others. Anyway, the question is held over.

Indo-Norwegian Scheme at Karwar

299. Sri D. S. NADKARNI (Ankola).—

Will the Minister of State for Ports and Fisheries be pleased to state:—

when the Indo-Norwegian Fisheries scheme, Karwar will be implemented.

Sri H. C. LINGA REDDY (Minister of State for Ports and Fisheries).—

The Indo-Norwegian Fisheries Scheme has already been implemented.

ಶ್ರೀ ಎಂ. ಎನ್. ಜಾಲಸಟಗಿ.—ಈ ಯೋಜನೆ ಮಂಜೂರಾದುದು ಯಾವಾಗ? ಮತ್ತು ಇದು ಈಗ ಯಾವ ಹಂತದಲ್ಲಿದೆ?

†ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಇಂಡೋ ನಾರ್ವೇಜಿಯನ್ ಪ್ರಾಜೆಕ್ಟ್ ಆರಂಭವಾದುದು 1962ರಲ್ಲಿ. ಇದು 1972ರ ವೇಳೆಗೆ ಮುಗಿಯಬೇಕೆಂದು ಇದೆ. ಇದರಲ್ಲಿ ಈಗಾಗಲೇ ಕೆಲಸ ಮುಗಿಯುತ್ತಾ ಬಂದಿದೆ. ಇದಕ್ಕಾಗಿ ಇಲ್ಲಿಯವರೆಗೆ ಆಗಿರುವ ಖರ್ಚು ಸುಮಾರು 46,20,000 ಆಗಿದೆ ಮತ್ತು ಒಟ್ಟು ಪ್ರಾಜೆಕ್ಟ್ ಖರ್ಚಿಗಾಗಿ ಇಟ್ಟಿರುವುದು 68,70,000 ಎಂದರೆ ಸುಮಾರು ಮುಕ್ಕಾಲು ಭಾಗದ ಕೆಲಸಗಳು ಮುಗಿದಿವೆ.

ಶ್ರೀ ಎಂ. ಎಂ. ಜಾಲಸಟಗಿ.—ಇದರಲ್ಲಿ ಎಷ್ಟು ಹಣ ರ್ಯಾಪ್ಸ್ ಆಗಿದೆ?